# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1396 (1568) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.12.2025 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ವಿವಿಧ ಅಭಿವೃದ್ಧಿ ನಿಗಮಗಳಿಗೆ ವಾರ್ಷಿಕವಾಗಿ ನೀಡಲಾಗುತ್ತಿರುವ ಅನುದಾನವೆಷ್ಟು: ಯಾವುದೇ ಅನುದಾನವನ್ನು ನೀಡದೆ ಇರುವ ನಿಗಮಗಳು ಯಾವುವು: ಅದಕ್ಕೆ ಕಾರಣವೇನು: ಯಾವಾಗ ಅವುಗಳಿಗೆ ಅನುದಾನ ನೀಡಲಾಗುವುದು:</td><td>ಯೋಜನಾ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿ/ಪ್ರಾಧಿಕಾರಗಳಿಗೆ ಈ ಕೆಳಕಂಡಂತೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ</th><th>ಮಂಡಳಿ/ಪ್ರಾಧಿಕಾರ</th><th>ಹಂಚಿಕೆಯಾದ ಮೊತ್ತ</th></tr>
<tr><td>1</td><td>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ</td><td>3000.00</td></tr>
<tr><td>2</td><td>ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ</td><td>35.08</td></tr>
<tr><td>3</td><td>ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ</td><td>41.82</td></tr>
<tr><td>4</td><td>ಕರಾವಳಿ ಅಭಿವೃದ್ಧಿ ಮಂಡಳಿ</td><td>12.52</td></tr>
<tr><td>5</td><td>ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ</td><td>16.84</td></tr>
</table></td></tr>
<tr><td>(ಆ)</td><td>ರಾಜ್ಯದಲ್ಲಿ ವಿವಿಧ ಶಾಸಕರುಗಳಿಗೆ ನೀಡುವ ಪ್ರದೇಶ ಅಭಿವೃದ್ಧಿ ಯೋಜನೆಯ ಅನುದಾನವು ಆಯಾ ಜಿಲ್ಲಾಧಿಕಾರಿ ಪಿಡಿ ಖಾತೆಯಲ್ಲಿದ್ದು ಸದರಿ ಖಾತೆಯನ್ನು ಸ್ಥಗಿತಗೊಳಿಸಿದ್ದು ಬಿಲ್ಲುಗಳು ಪಾವತಿಯಾಗದಿರಲು ಕಾರಣವೇನು: ಈ ಸ್ಥಗಿತವನ್ನು ಯಾವಾಗ ತೆರವುಗೊಳಿಸಲಾಗುವುದು:</td><td>ರಾಜ್ಯ ಸರ್ಕಾರವು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಸ್ಥಳೀಯ ಪ್ರದೇಶಾಭಿವೃದ್ಧಿಗಾಗಿ ನೀಡುವ ಅನುದಾನವು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿದ್ದು, ಪ್ರತಿ ವರ್ಷ ಏಪ್ರಿಲ್ ನಂತರ ಆಡಿಟ್ ಮಾಡಿಸಿ ಆಡಿಟ್ ವರದಿಯನ್ನು ಆರ್ಥಿಕ ಇಲಾಖೆಗೆ ಮೂರು ತಿಂಗಳೊಳಗಾಗಿ ಸಲ್ಲಿಸಬೇಕಾಗಿರುತ್ತದೆ. ಆಡಿಟ್ ವರದಿ ಸಲ್ಲಿಸದಿರುವ ಪಿ.ಡಿ. ಖಾತೆಗಳನ್ನು ಸ್ಥಗಿತಗೊಳಿಸಲಾಗುತ್ತದೆ. ಆಡಿಟ್ ವರದಿ ಸಲ್ಲಿಸಿದ ನಂತರ ಸ್ಥಗಿತಗೊಳಿಸಿರುವ ಖಾತೆಗಳನ್ನು ತೆರವುಗೊಳಿಸಲಾಗುತ್ತದೆ.</td></tr>
<tr><td>(ಇ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚು ಅವಧಿಯ ಮಳೆ ಬರುತ್ತಿದ್ದು ಅತಿ ಕಡಿಮೆ ಅವಧಿಯೊಳಗೆ ಭೌತಿಕ ಕಾಮಗಾರಿಗಳನ್ನು ಮುಗಿಸಬೇಕಿದ್ದು ಈ ಅವಧಿಯಲ್ಲಿ ಕಾಮಗಾರಿಗಳಿಗೆ ನಿಗದಿತ ಸಮಯದಲ್ಲಿ ಚಾಲನೆ ಅನುಷ್ಠಾನ ಮತ್ತು ಪೂರ್ಣಗೊಳಿಸಬೇಕಾಗಿದ್ದು ಈ ವಿಷಯವು ಅನುದಾನ ಮಂಜೂರು ಮಾಡುವ ರಾಜ್ಯಮಟ್ಟದ ಕಚೇರಿಗಳಿಗೆ ಮನವರಿಕೆ ಮಾಡಲಾಗಿದೆಯೇ: ಈ ಅನುದಾನ ಮಂಜೂರಾತಿ ವ್ಯತ್ಯಯದಿಂದ ಅನುದಾನ ವೆಚ್ಚವಾಗುವಲ್ಲಿ ತೊಂದರೆಯಾಗುತ್ತಿದೆಯೇ:</td><td>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಹಾಗೂ ಮಂಡಳಿಗಳ ಅನುದಾನದಲ್ಲಿ 2 ವರ್ಷಗಳ ಕಾಲಾವಧಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅವಕಾಶವಿರುವುದರಿಂದ ಯಾವುದೇ ಅನುದಾನ ವ್ಯಪಗತವಾಗುವುದಿಲ್ಲ. ಆದ್ದರಿಂದ ಯಾವುದೇ ಸಮಸ್ಯೆ ಉದ್ಭವವಾಗುವುದಿಲ್ಲ.</td></tr>
</table>

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ)</td><td>ಆಯಾಯ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ ಜಿಲ್ಲೆಗಳನ್ನು ನಿಗಧಿಪಡಿಸಲಾಗಿದೆಯೇ: ಹಾಗಿದ್ದಲ್ಲಿ ಯಾವ ಮಂಡಳಿಗಳಿಗೆ ಯಾವ್ಯಾವ ಜಿಲ್ಲೆಗಳ ವ್ಯಾಪ್ತಿಯನ್ನು ನಿಗಧಿಪಡಿಸಲಾಗಿದೆ:</td><td>ಹೌದು, ಜಿಲ್ಲೆಗಳನ್ನು ನಿಗಧಿಪಡಿಸಲಾಗಿದೆ.<br><br>ಯೋಜನಾ ಇಲಾಖೆಯ ಅಧೀನಕ್ಕೆ ಒಳಪಡುವ ಮಂಡಳಿ/ ಪ್ರಾಧಿಕಾರಗಳು ಈ ಕೆಳಕಂಡ ಜಿಲ್ಲೆಗಳ ವ್ಯಾಪ್ತಿ ಹೊಂದಿರುತ್ತದೆ;
<table>
<tr><th>ಕ್ರ. ಸಂ</th><th>ಮಂಡಳಿ/ಪ್ರಾಧಿಕಾರ</th><th>ಮಂಡಳಿಯ ವ್ಯಾಪ್ತಿಯಲ್ಲಿರುವ ಜಿಲ್ಲೆಗಳು</th></tr>
<tr><td>1</td><td>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ</td><td>ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ</td></tr>
<tr><td>2</td><td>ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ</td><td>ಬೆಳಗಾವಿ, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಹಾಸನ, ಹಾವೇರಿ, ಕೊಡಗು, ಮೈಸೂರು ಮತ್ತು ಶಿವಮೊಗ್ಗ.</td></tr>
<tr><td>3</td><td>ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ</td><td>ಬಾಗಲಕೋಟೆ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಕೋಲಾರ, ರಾಮನಗರ, ತುಮಕೂರು ಮತ್ತು ವಿಜಯಪುರ</td></tr>
<tr><td>4</td><td>ಕರಾವಳಿ ಅಭಿವೃದ್ಧಿ ಮಂಡಳಿ</td><td>ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ</td></tr>
<tr><td>5</td><td>ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ</td><td>ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ದಕ್ಷಿಣ ಕನ್ನಡ, ಕೊಡಗು, ಚಾಮರಾಜನಗರ, ಮೈಸೂರು, ವಿಜಯಪುರ, ಬಳ್ಳಾರಿ, ಕಲಬುರಗಿ, ಯಾದಗಿರಿ, ರಾಯಚೂರು, ಬೆಳಗಾವಿ, ಉತ್ತರ ಕನ್ನಡ, ಬೀದರ್ ಹಾಗೂ ಹೊರರಾಜ್ಯದ ಗಡಿ ಜಿಲ್ಲೆಗಳಾದ ಕಾಸರಗೋಡು-ಕೇರಳ, ದಕ್ಷಿಣ ಸೊಲ್ಲಾಪುರ, ಸಾಂಗ್ಲಿ, ಜತ್ತ, ಅಕ್ಕಲಕೋಟ-ಮಹಾರಾಷ್ಟ್ರ, ಅನಂತಪುರ-ಆಂಧ್ರಪ್ರದೇಶ, ಮೆಹಬೂಬ್ ನಗರ-ತೆಲಂಗಾಣ, ತಾಳವಾಡಿ, ನೀಲಗಿರಿ, ಕೃಷ್ಣಗಿರಿ-ತಮಿಳುನಾಡು, ಗೋವಾ-ಕರ್ನಾಟಕದ ಗಡಿ ಭಾಗ</td></tr>
</table></td></tr>
<tr><td>ಉ)</td><td>ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಮಂಡಳಿಯನ್ನಾಗಿ ಮೇಲ್ದರ್ಜೆಗೇರಿಸಿ ಪೂರ್ಣ ಅಧಿಕಾರ ಹಾಗೂ ಅನುದಾನವನ್ನು ನೀಡಲಾಗಿದೆಯೇ: ನೀಡದಿದ್ದರೆ ಯಾವಾಗ ನೀಡಲಾಗುವುದು: ಸದರಿ ಅನುದಾನವನ್ನು ಹಂಚಿಕೆ ಮಾಡುವ ನಿಯಮಗಳು ಯಾವುವು?</td><td>ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್/56/ಪಿಟಿಪಿ/2021 ಪ್ರಕಾರ ಮಂಡಳಿಯನ್ನಾಗಿ ಪರಿವರ್ತಿಸಲಾಗಿದೆ. ಮಂಡಳಿಗೆ ಎಲ್ಲಾ ಅಧಿಕಾರವನ್ನು ಕಾಯ್ದೆ ಪ್ರಕಾರ ನೀಡಲಾಗಿದೆ. ಆರ್ಥಿಕ ಇಲಾಖೆಯು ಹಂಚಿಕೆ ಮಾಡಲಾದ ಅನುದಾನ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th>ಉಪಶೀರ್ಷಿಕೆ</th><th>ಹಂಚಿಕೆ ಮಾಡಲಾದ ಅನುದಾನ</th></tr>
<tr><td colspan="2">ಅ) ಲೆಕ್ಕ ಶೀರ್ಷಿಕೆ 2217-80-001-1-06</td></tr>
<tr><td>ಆಡಳಿತ ವೆಚ್ಚ</td><td>202.95</td></tr>
<tr><td>ಒಟ್ಟು</td><td>202.95</td></tr>
<tr><td colspan="2">ಆ) ಲೆಕ್ಕಶೀರ್ಷಿಕೆ – 4217-60-051-0-03</td></tr>
<tr><td>ಬಂಡವಾಳ ವೆಚ್ಚ (132)</td><td>796.95</td></tr>
<tr><td>ಪರಿಶಿಷ್ಟ ಜಾತಿ ಉಪಯೋಜನೆ (422)</td><td>180.08</td></tr>
<tr><td>ಗಿರಿಜನ ಉಪಯೋಜನೆ (423)</td><td>72.97</td></tr>
<tr><td>ಒಟ್ಟು</td><td>1050.00</td></tr>
<tr><td>ಒಟ್ಟು(ಅ+ಆ)</td><td>1252.95</td></tr>
</table></td></tr>
</table>

**ಸಂಖ್ಯೆ: ಪಿಡಿಎಸ್/8/ಕೆಡಿಬಿ/2025**